# ಕವಿಪ್ರನಿನಿ ಮತ್ತು ವಿಸಕಂಗಳ ಪಿಂಚಣಿ ಮತ್ತು ಉಪದಾನ ಟ್ರಸ್ಟ್

ಕಡತ ಸಂಖ್ಯೆ: ಕೆಇಪಿಜಿಟಿ/ಕೆಸಿಒ–123/2012–13/ C4S-34

6 ನೇ ಮಹಡಿ,
ಕಾವೇರಿ ಭವನ,
ಬೆಂಗಳೂರು–560 009.
ದಿನಾಂಕ: 12 DEC 2012

## ಸುತ್ತೋಲೆ

ವಿಷಯ: ಕರ್ನಾಟಕ ಸರ್ಕಾರ ಮತ್ತು ಕವಿಪ್ರನಿನಿ/ವಿದ್ಯುತ್ ಸರಬರಾಜು ಕಂಪನಿಗಳು ಭರಿಸಬೇಕಾದ ಭಾಗದ ಪಿಂಚಣಿ ಮತ್ತು ಉಪದಾನ ವೆಚ್ಚ.

ಉಲ್ಲೇಖ: 1. ಕರ್ನಾಟಕ ವಿದ್ಯುಚ್ಛಕ್ತಿ ಸುಧಾರಣಾ (ಕವಿಪ್ರನಿನಿ ಉದ್ಯಮಗಳು ಮತ್ತು ಅದರ ಸಿಬ್ಬಂದಿಯು ವಿದ್ಯುಚ್ಛಕ್ತಿ ವಿತರಣೆ ಮತ್ತು ಚಿಲ್ಲರೆ ಸರಬರಾಜು ಕಂಪನಿಗಳಿಗೆ ವರ್ಗಾವಣೆ) ನಿಯಮಗಳು 2002.

2. ಸರ್ಕಾರಿ ಆದೇಶ ಸಂಖ್ಯೆ ಡಿಇ 15 ಪಿಎಸ್ಆರ್ 2002 ದಿನಾಂಕ 19.12.2002.
3. ಈ ಕಛೇರಿ ಪತ್ರ ಸಂಖ್ಯೆ: ಕೆಇಪಿಜಿಟಿ/ಪಿ10/2011–12/813–18 ದಿನಾಂಕ 16.12.2011.
4. ಸುತ್ತೋಲೆ ಸಂಖ್ಯೆ: ಕೆಇಪಿಜಿಟಿ/ಪಿ10/2011–12/1225–38 ದಿನಾಂಕ 22.03.2012.
5. ಆರ್ಥಿಕ ಸಲಹೆಗಾರರು (ಲೆ & ಸಂ) ಇವರ ಟಿಪ್ಪಣಿ ಸಂಖ್ಯೆ: ಕೆಸಿಒ–1/39722/2012–13 ದಿನಾಂಕ 26.09.2012.

* * * * *

1. ಉಲ್ಲೇಖ–1 ಮತ್ತು 2 ರಲ್ಲಿನ ಕರ್ನಾಟಕ ಸರ್ಕಾರದ ಅಧಿಸೂಚನೆ/ಆದೇಶದ ಹಿನ್ನೆಲೆಯಲ್ಲಿ, ಸರ್ಕಾರ ಮತ್ತು ಕವಿಪ್ರನಿನಿ/ವಿಸಕಂಗಳು ಕಂಪನಿಗಳು ಭರಿಸಬೇಕಾದ ಭಾಗದ ಪರಿವರ್ತಿತ ಪಿಂಚಣಿ (Commuted Pension) ಮತ್ತು ಉಪದಾನದ (DCRG) ವಿವರಗಳನ್ನು ಸಲ್ಲಿಸಲು ಉಲ್ಲೇಖ–3 ರಲ್ಲಿನ ಪತ್ರದಲ್ಲಿ ಕವಿಪ್ರನಿನಿ/ವಿಸಕಂಗಳಿಗೆ ಕೋರಲಾಗಿತ್ತು.

2. ಮುಂದುವರೆದು, ಉಲ್ಲೇಖ–4 ರಲ್ಲಿನ ಸುತ್ತೋಲೆಯೊಂದಿಗೆ ಅನುಬಂಧ–1 ಮತ್ತು 2 ರಲ್ಲಿ ಸರ್ಕಾರ ಹಾಗೂ ಕಂಪನಿಗಳು ಭರಿಸಬೇಕಾದ ಭಾಗದ ಪಿಂಚಣಿ ಮತ್ತು ಉಪದಾನ ವೆಚ್ಚದ ವಿವರಗಳನ್ನು ಸಲ್ಲಿಸುವ ಬಗ್ಗೆ ಉದಾಹರಣೆ ಸಹಿತ ತಿಳಿಯಪಡಿಸಿ, ನಿವೃತ್ತಗೊಂಡ ಅಧಿಕಾರ/ನೌಕರರ ವಿವರಗಳನ್ನು ಅಗತ್ಯವಿದ್ದಲ್ಲಿ ಕವಿಪ್ರನಿನಿಯ ಆರ್ಥಿಕ ಸಲಹೆಗಾರರು (ಲೆ & ಸಂ.) ರವರ ಕಛೇರಿಯಿಂದ ಪಡೆದು ಸರ್ಕಾರ ಮತ್ತು ಕಂಪನಿಗಳ ಭಾಗದ ಪರಿವರ್ತಿತ ಪಿಂಚಣಿ/ಉಪದಾನ ವಿವರಗಳನ್ನು ಪ್ರತಿ ಮಾಹೆ ಟ್ರಸ್ಟ್‌ಗೆ ಸಲ್ಲಿಸಲು ಕೋರಲಾಗಿತ್ತು. ಆದರೆ ಕೆಲವು ಕಂಪನಿಗಳು ನಿವೃತ್ತಗೊಂಡ ಪ್ರತಿ ನೌಕರರ ಸದರಿ ವಿವರಗಳನ್ನು ಟ್ರಸ್ಟ್‌ಗೆ ಇದುವರೆಗೆ ಸಲ್ಲಿಸಿರುವುದಿಲ್ಲ.

3. **ಕವಿಪ್ರನಿನಿ ಮತ್ತು ವಿಸಕಂಗಳ ಲೆಕ್ಕ ಘಟಕಗಳು ಸಹ ಸರ್ಕಾರ ಹಾಗೂ ಕಂಪನಿಗಳು ಭರಿಸಬೇಕಾಗ ಭಾಗದ ಪಿಂಚಣಿ ಮತ್ತು ಕುಟುಂಬ ಪಿಂಚಣಿಯ ವಿವರಗಳನ್ನು ಪ್ರತಿ ಮಾಹೆಯ "ಪಿಂಚಣಿಯ ನಿಧಿ ಕೋರಿಕೆ ಪಟ್ಟಿ"ಯಲ್ಲಿ ಸರಿಯಾಗಿ ನಮೂದಿಸುತ್ತಿಲ್ಲ.**

4. ಕಂಡಿಕೆ 2 & 3 ರಲ್ಲಿನ ವಿವರಗಳು ಟ್ರಸ್ಟ್‌ನ ಲೆಕ್ಕ ಪತ್ರಗಳ ದಾಖಲಾತಿ ಹಾಗೂ ಸರ್ಕಾರಕ್ಕೆ ಪ್ರತಿ ಮಾಹೆ ಸರ್ಕಾರ & ಕಂಪನಿಗಳು ಭರಿಸಬೇಕಾದ ಭಾಗದ ವೆಚ್ಚದ ವಿವರಗಳು ಸಲ್ಲಿಸುವುದು ಅತಿ ಜರೂರು ಇರುತ್ತದೆ. ಸದರಿ ಕಾರಣ, ಕವಿಪ್ರನಿನಿ ಮತ್ತು ವಿಸಕಂಗಳ ಸಂಬಂಧಪಟ್ಟ ಲೆಕ್ಕ ಘಟಕಗಳು ಲಗತ್ತಿಸಿರುವ ಅನುಬಂಧ–1, 2 & 3 ರಲ್ಲಿ ನಮೂದಿಸಿರುವ ಮಾರ್ಗಸೂಚಿಯಂತೆ ಈ ಕೆಳಕಂಡ ಐದು ವಿವರಣೆ ಪಟ್ಟಿಗಳನ್ನು (A1, A2, & A3 & B1, B2) ತಯಾರಿಸಿ ಆಯಾ ಕಛೇರಿಯಲ್ಲಿ ದಾಖಲಿಸುವ ಜೊತೆಗೆ, ಟ್ರಸ್ಟ್‌ಗೆ ಅತಿ ಜರೂರು 31.12.2012 ರೊಳಗೆ ಕಳುಹಿಸಿಕೊಡತಕ್ಕದ್ದು.

**A:** **ಕವಿಪ್ರನಿನಿ/ವಿಸಕಂಗಳ ಲೆಕ್ಕ ಘಟಕಗಳ ದಾಖಲೆಗಳ ಪುಸ್ತಕಗಳ ಪ್ರಕಾರ ದಿನಾಂಕ 31.05.2002 ರಂದು ಇದ್ದ ಕವಿಮಂ/ಕವಿಪ್ರನಿನಿಯ ಪಿಂಚಣಿದಾರರ, ಕುಟುಂಬ ಪಿಂಚಣಿದಾರರ ಪಿಂಚಣಿ/ಕುಟುಂಬ ಪಿಂಚಣಿ ವೆಚ್ಚ ಸಂಪೂರ್ಣವಾಗಿ ಸರ್ಕಾರ ಭರಿಸುವುದರಿಂದ ಈ ಕೆಳಕಂಡ A1, A2, & A3 ವಿವರಣಾ ಪಟ್ಟಿಯನ್ನು ಲಗತ್ತಿಸಿರುವ ಅನುಬಂಧ-1 ರ ಮಾರ್ಗಸೂಚಿಯಂತೆ ನಿಗದಿತ ನಮೂನೆಯಲ್ಲಿ ತಯಾರಿಸಿ ಶೀರ್ಷಿಕೆಯಡಿ ಟ್ರಸ್ಟ್‌ಗೆ ಕಳುಹಿತಕ್ಕದ್ದು ಸದರಿ ವಿವರಣೆ ಪಟ್ಟಿ ಎಲ್ಲಾ ಕಂಪನಿಗಳ ಲೆಕ್ಕ ಘಟಕಗಳಿಂದ ಸ್ವೀಕರಿಸಿದ ನಂತರ ಸಂಕಲನಗೊಂಡ ಮಾಹಿತಿ ಕವಿಪ್ರನಿನಿ web-site ನಲ್ಲಿ ಪ್ರಕಟಿಸಲಾಗುವುದು.**

A1: 31-05-2002 ರಂದು ಇದ್ದ ಕವಿಮಂ/ಕವಿಪ್ರನಿನಿಯ **ಪಿಂಚಣಿದಾರರ ಪಟ್ಟಿ**
(List of KEB/KPTCL pensioners existed as at 31-5-2002)

A2: 31.05.2002 ರಂದು ಇದ್ದ ಕವಿಮಂ/ಕವಿಪ್ರನಿನಿಯ **ಕುಟುಂಬ ಪಿಂಚಣಿದಾರರ ಪಟ್ಟಿ**
(List of KEB/KPTCLfamily pensioners existed as at 31-5-2002)

A3: 31.05.2002 ರಂದು ಇದ್ದ ಕವಿಮಂ/ಕವಿಪ್ರನಿನಿಯ ಪಿಂಚಣಿದಾರರು 01.06.2002 ರ ನಂತರ ಮರಣ ಹೊಂದಿದ್ದು ಅವರ ವಾರಸುದಾರರು ನಿಯಮಾನುಸಾರ ಕುಟುಂಬ ಪಿಂಚಣಿ ಪಡೆಯುತ್ತಿರುವ ಕುಟುಂಬ ಪಿಂಚಣಿದಾರರ ಪಟ್ಟಿ.
(List of KEB/KPTCL pensioners existed as at 31-5-2002 but due to their death on or after 1-6-2002, family pension sanctioned as per Rules to the legal heirs eligible as family pensioners.)

**B:** **<u>1.6.2002 ರ ನಂತರ ನಿವೃತ್ತಿಯಾದವರಿಗೆ ಪಿಂಚಣಿ ಮತ್ತು ಕುಟುಂಬ ಪಿಂಚಣಿ ಸರ್ಕಾರ ಮತ್ತು ಕಂಪನಿಗಳು ಭರಿಸಬೇಕಾದ ಭಾಗದ ವೆಚ್ಚ:</u>**

01.06.2002 ರಿಂದ 30.11.2012 ರ ಅವಧಿಯಲ್ಲಿ ನಿವೃತ್ತಿ ಹೊಂದಿದ ಅಧಿಕಾರಿ/ನೌಕರರಿಗೆ ಪ್ರಪ್ರಥಮವಾಗಿ ಪರಿವರ್ತಿತ ಪಿಂಚಣಿ/ಉಪದಾನ ಮಂಜೂರಾತಿಯಾದಾಗ ಇದ್ದ ಈ ಕೆಳಕಂಡ ವಿವರಗಳನ್ನೊಳಗೊಂಡ ವರ್ಷಾವಾರು/ಕಂಪನಿವಾರು ಸೇವಾ ವಿವರಗಳ ಮಾಹಿತಿಯನ್ನು ಉಲ್ಲೇಖ-5 ರಲ್ಲಿ ಕವಿಪ್ರನಿನಿಯ ಆರ್ಥಿಕ ಸಲಹೆಗಾರರು(ಲೆ & ಸಂ) ಕಛೇರಿಯಿಂದ ಸ್ವೀಕರಿಸಿದ್ದು ಇ.ದನ್ನು "ಕವಿಪ್ರನಿನಿ ವೆಬ್ ತಾಣದ "ಇ-ಪ್ರಸರಣ" ಶೀರ್ಷಿಕೆಯಡಿ" ಎಂದು ಪ್ರಕಟಿಸಲಾಗಿದೆ.

1. ಕ್ರಮ ಸಂಖ್ಯೆ
2. ನಿವೃತ್ತಿ ಹೊಂದಿರುವ ಅಧಿಕಾರಿ/ನೌಕರರ (ಪಿಂಚಣಿದಾರರ) ಆರ್‌ಪಿಎಆರ್ ಸಂಖ್ಯೆ
3. ಪಿಂಚಣಿದಾರರ ಹೆಸರು
4. ಪಿಂಚಣಿದಾರರ ಹೊಂದಿದ್ದ ಹುದ್ದೆ
5. ಪಿಪಿಓ ಸಂಖ್ಯೆ
6. ಪಿಪಿಓ ದಿನಾಂಕ
7. ನಿವೃತ್ತಿಯ ದಿನಾಂಕ
8. ಕೆಲಸಕ್ಕೆ ಸೇರಿದ ದಿನಾಂಕ
9. ಉಪದಾನದ ಮೊತ್ತ
10. ಪರಿವರ್ತಿತ ಪಿಂಚಣಿಯ ಮೊತ್ತ
11. ಸರ್ಕಾರ ಭರಿಸಬೇಕಾದ ಭಾಗದ ಉಪದಾನ
12. ವಿದ್ಯುತ್ ಸರಬರಾಜು ಕಂಪನಿ ಭರಿಸಬೇಕಾದ ಭಾಗದ ಉಪದಾನ
13. ಸರ್ಕಾರ ಭರಿಸಬೇಕಾದ ಪರಿವರ್ತಿತ ಪಿಂಚಣಿ ಭಾಗ
14. ವಿದ್ಯುತ್ ಸರಬರಾಜು ಕಂಪನಿ ಭರಿಸಬೇಕಾದ ಪರಿವರ್ತಿತ ಪಿಂಚಣಿ ಭಾಗ
15. ಸರ್ಕಾರ ಭರಿಸಬೇಕಾದ ಪಿಂಚಣಿಯ ಶೇಕಡವಾರು ಭಾಗ
16. ವಿದ್ಯುತ್ ಸರಬರಾಜು ಕಂಪನಿಯ ಶೇಕಡವಾರು ಭಾಗ

ಮೇಲ್ಕಂಡ ಕ್ರಮ ಸಂಖ್ಯೆ **1** ರಿಂದ **16** ರಲ್ಲಿನ ವಿವರಗಳನ್ನು ಉಪಯೋಗಿಸಿಕೊಂಡು ಕವಿಪ್ರನಿನಿ ಮತ್ತು ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳ ಲೆಕ್ಕ ಘಟಕಗಳು ಅನುಬಂಧ-2 ರಲ್ಲಿ ನಮೂದಿಸಿರುವ ಮಾರ್ಗಸೂಚಿ ಪ್ರಕಾರ **01.06.2002**ರ ನಂತರ ನಿವೃತ್ತಿಯಾದ ಕವಿಪ್ರನಿನಿ/ವಿಸಕಂಗಳ ಸಂಬಂಧಪಟ್ಟ ಲೆಕ್ಕ ಘಟಕಗಳು ಪಿಂಚಣಿದಾರರ/ಕುಟುಂಬ ಪಿಂಚಣಿದಾರರ ವಿವರಣೆ ಪಟ್ಟಿಗಳನ್ನು ಈ ಕೆಳಕಂಡಂತೆ ತಯಾರಿಸಿ ಟ್ರಸ್ಟ್‌ಗೆ ಕಳುಹಿಸಿಕೊಡತಕ್ಕದು:

B1: 01.06.2002 ರ ನಂತರ ನಿವೃತ್ತಿಯಾದ ಕವಿಪ್ರನಿನಿ/ವಿಸಕಂಗಳ ಪಿಂಚಣಿದಾರರ ಪಟ್ಟಿ
(List of KPTCL/ESCOMs pensioners retired on or after 01.06.2002.)

B2: 01.06.2002 ರ ನಂತರ ನಿವೃತ್ತಿಯಾದ ಕವಿಪ್ರನಿನಿ/ವಿಸಕಂಗಳ ಪಿಂಚಣಿದಾರರು 01.06.2002 ರ ನಂತರ ನಿಧನ ಹೊಂದಿದ ಕಾರಣ ನಿಯಮಾನುಸಾರ ಕುಟುಂಬ ಪಿಂಚಣಿ ಪಡೆಯುತ್ತಿರುವ ಕುಟುಂಬ ಪಿಂಚಣಿದಾರರ ಪಟ್ಟಿ.
(List of KPTCL/ESCOMs' pensioners retired on or after 01.06.2002 but due to their death after 01.06.2002 family pension as per Rule sanctioned to their family pensioners including death cases.)

**C: ಕವಿಪ್ರನಿನಿ/ವಿಸಕಂಗಳ ಸಂಬಂಧಪಟ್ಟ ಲೆಕ್ಕ ಘಟಕಗಳು ನಿಧಿ ಕೋರಿಕೆ ಪಟ್ಟಿಯಲ್ಲಿ ಸರ್ಕಾರ ಮತ್ತು ಕಂಪನಿ ಭರಿಸಬೇಕಾದ ಮಾಹೆಯಾನ ಪಿಂಚಣಿ ಮತ್ತು ಕುಟುಂಬ ಪಿಂಚಣಿ ವೆಚ್ಚ ಸರಿಯಾಗಿ ನಮೂದಿಸುವ ಬಗ್ಗೆ:**

ಕವಿಪ್ರನಿನಿ & ವಿಸಕಂಗಳ ಲೆಕ್ಕ ಘಟಕಗಳು ಪ್ರತಿ ತಿಂಗಳು ಪಿಂಚಣಿ ಪಾವತಿಗಾಗಿ ಲಗತ್ತಿಸಿರುವ ನಿಧಿ ಕೋರಿಕೆ ಪಟ್ಟಿ ನಮೂನೆ-2 ರಲ್ಲಿ ವಿವರಗಳನ್ನು ಸಲ್ಲಿಸುವಾಗ (i) A1, A2, ಮತ್ತು A3 ವಿವರಣೆ ಪಟ್ಟಿ ಆಧಾರದ ಮೇಲೆ 31.5.2002 ರ ಅಂತ್ಯಕ್ಕೆ ಇದ್ದ ಪಿಂಚಣಿದಾರರ / ಕುಟುಂಬ ಪಿಂಚಣಿದಾರರ ವೆಚ್ಚ ಕ್ರಮವಾಗಿ ನಿಧಿ ಕೋರಿಕೆ ಪಟ್ಟಿಯ G3 & G6 ಅಂಕಣದಲ್ಲಿ ನಮೂದಿಸತಕ್ಕದು, ಹಾಗು (ii) B1, B2 ವಿವರಣೆ ಪಟ್ಟಿ ಆಧಾರದ ಮೇಲೆ 01.6.2002 ರ ನಂತರ ನಿವೃತ್ತಿಯಾದ ಪಿಂಚಣಿದಾರರ/ ಕುಟುಂಬ ಪಿಂಚಣಿದಾರರ ವೆಚ್ಚ **ಸರ್ಕಾರದ ಭಾಗ** GC3 & GC7 ಅಂಕಣದಲ್ಲಿ ಹಾಗು **ಕಂಪನಿ ಭರಿಸಬೇಕಾದ ಭಾಗ**ದ ವೆಚ್ಚ ನಿಧಿ ಕೋರಿಕೆ ಪಟ್ಟಿಯ GC4 & GC8 ಅಂಕಣದಲ್ಲಿ ನಮೂದಿಸತಕ್ಕದು.

**D: A1, A2, & A3 ಮತ್ತು B1, B2 ವಿವರಣೆ ಪಟ್ಟಿ:**

(ಅ) ಸರ್ಕಾರ ಭರಿಸಬೇಕಾದ ವೆಚ್ಚದ ಮೇಲ್ಕಂಡ A1, A2, & A3 ರ ವಿವರಣೆ ಪಟ್ಟಿಗಳನ್ನು ಹಾಗೂ

(ಆ) ಸರ್ಕಾರ ಮತ್ತು ಕವಿಪ್ರನಿನಿ/ವಿದ್ಯುತ್ ಸರಬರಾಜು ಕಂಪನಿಗಳು ಭರಿಸಬೇಕಾದ ವೆಚ್ಚದ B1 & B2 ವಿವರಣೆ ಪಟ್ಟಿಗಳನ್ನು e-mail (pgtrsutkptcl@yahoo.com) ವಿಳಾಸಕ್ಕೆ soft copy ಹಾಗೂ hard copy ಸಹ 31.12.2012 ರೊಳಗೆ ಈ ಕಛೇರಿಗೆ ಕಳುಹಿಸಿಕೊಡಲು ಕೋರಲಾಗಿದೆ.

**E: ಕಂಪನಿ ನಿಗಮ ಕಛೇರಿಗಳ ಪರಿವರ್ತಿತ ಪಿಂಚಣಿ ಮತ್ತು ಉಪದಾನ ಮರುಪಾವತಿ ಕ್ಲೇಮುಗಳು:**

1.12.2012 ರಿಂದ ಆಯಾ ಕಂಪನಿ ನಿಗಮ ಕಾರ್ಯಾಲಯವು ಪ್ರತಿ ಮಾಹೆ ಲಗತ್ತಿಸಿರುವ ಅನುಬಂಧ-3 ರ ಮಾರ್ಗಸೂಚಿ ಪ್ರಕಾರ ಮರುಪಾವತಿಗಾಗಿ ಕ್ಲೇಮುಗಳನ್ನು ಪಿಂಚಣಿ ಮತ್ತು ಉಪದಾನ ಟ್ರಸ್ಟ್‌ಗೆ ಸಲ್ಲಿಸುವಾಗ ನಿವೃತ್ತಿಗೊಂಡ ಪ್ರತಿ ಅಧಿಕಾರಿ/ನೌಕರರಿಗೆ ಸರ್ಕಾರ ಭರಿಸಬೇಕಾದ ಭಾಗದ ಮತ್ತು ಕಂಪನಿ ಭರಿಸಬೇಕಾದ ಭಾಗದ ವೆಚ್ಚದ ಪರಿವರ್ತಿತ ಪಿಂಚಣಿ (commuted pension)/ಉಪದಾನ (DCRG) ವಿವರಗಳನ್ನು ಕಡ್ಡಾಯವಾಗಿ ನಮೂದಿಸಿ ಲೆಕ್ಕ ಪರಿಶೋಧನೆಗೊಳಿಸಿದ ಕ್ಲೇಮುಗಳನ್ನು ಟ್ರಸ್ಟ್‌ಗೆ ಸಲ್ಲಿಸವುದು.

5. ಆಯಾ ಕಂಪನಿಗಳ ಆರ್ಥಿಕ ಸಲಹೆಗಾರರು ಸಹ ಸಂಬಂದಪಟ್ಟ ಎಲ್ಲಾ ಲೆಕ್ಕ ಘಟಕಗಳ ಈ ಸುತ್ತೋಲೆಯಲ್ಲಿನ ನಿರ್ದೇಶನವನ್ನು ಪಾಲಿಸುವ ಬಗ್ಗೆ ಮೇಲ್ವಿಚಾರಣೆ ವಹಿಸಲು ಸಹ ಕೋರಲಾಗಿದೆ.

[signature]

ನಿರ್ದೇಶಕರು(ಹಣಕಾಸು), ಕವಿಪ್ರನಿನಿ ಮತ್ತು
ಅಧ್ಯಕ್ಷರು ಪಿಂಚಣಿ & ಉಪದಾನ ಟ್ರಸ್ಟ್

ಪ್ರತಿ ಮಾಹಿತಿಗಾಗಿ:

1. ವ್ಯವಸ್ಥಾಪಕ ನಿರ್ದೇಶಕರು, ಬೆವಿಕಂ/ಮವಿಸಕಂ/ಹುವಿಸಕಂ/ಗುವಿಸಕಂ/ಚಾವಿಸನಿ.
2. ಆರ್ಥಿಕ ಸಲಹೆಗಾರರು, ಬೆವಿಕಂ/ಮವಿಸಕಂ/ಹುವಿಸಕಂ/ಗುವಿಸಕಂ/ಚಾವಿಸನಿ.
3. ಆರ್ಥಿಕ ಸಲಹೆಗಾರರು (ಲೆ & ಸಂ), ಕವಿಪ್ರನಿನಿ.
4. ಆರ್ಥಿಕ ಸಲಹೆಗಾರರು (ಆಂ.ಲೆಕ್ಕ ಪರಿಶೋಧನೆ), ಕವಿಪ್ರನಿನಿ.

<u>ಪ್ರತಿ ಸೂಕ್ತ ಕ್ರಮಕ್ಕಾಗಿ</u>

5. ಕಾರ್ಯ ನಿರ್ವಾಹಕ ಇಂಜಿನಿಯರ್ (ವಿ), (ಕಾ & ಪಾ) ವಿಭಾಗ.
6. ಲೆಕ್ಕಾಧಿಕಾರಿ (ಕಾ & ಪಾ)---------------------------
7. ಲೆಕ್ಕಾಧಿಕಾರಿ ಎಲ್ಲಾ ಆಂತರಿಕ ಲೆಕ್ಕ ಪರಿಶೋಧಕ ಲೆಕ್ಕ ಘಟಕಗಳು.

## 31-05-2002 ರಂದು ಇದ್ದ ಕರ್ನಾಟಕ ವಿದ್ಯುತ್ ಮಂಡಳಿ/ಕವಿಪ್ರನಿನಿಯ ಪಿಂಚಣಿದಾರರ/ಕುಟುಂಬ ಪಿಂಚಣಿದಾರರ ಪಟ್ಟಿ ತಯಾರಿಸಲು ಮಾರ್ಗಸೂಚಿ:

### A1: 31-05-2002 ರ ಅಂತ್ಯಕ್ಕೆ ಇದ್ದ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ/ಕವಿಪ್ರನಿನಿಯ ಪಿಂಚಣಿದಾರರ ಪಟ್ಟಿ:

1. ಕವಿಪ್ರನಿನಿ/ವಿಸಕಂಗಳ ಲೆಕ್ಕ ಘಟಕಗಳ ದಾಖಲೆ ಪುಸ್ತಕಗಳ ಪ್ರಕಾರ ದಿನಾಂಕ 31.05.2002 ರ ಅಂತ್ಯಕ್ಕೆ ಇದ್ದ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ/ಕವಿಪ್ರನಿನಿ ಪಿಂಚಣಿದಾರರ ಪಟ್ಟಿಯನ್ನು ಹಿಂದಿನ ಪುಟದಲ್ಲಿ ನಮೂದಿಸಿರುವ A1 ನಮೂನೆಯಲ್ಲಿ ಲೆಕ್ಕ ಘಟಕಗಳು A1 ವಿವರಣಾ ಪಟ್ಟಿಯನ್ನು ತಯಾರಿಸತಕ್ಕದು.

### A2: 31-05-2002 ರ ಅಂತ್ಯಕ್ಕೆ ಇದ್ದ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ/ಕವಿಪ್ರನಿನಿಯ ಕುಟುಂಬ ಪಿಂಚಣಿದಾರರ ಪಟ್ಟಿ:

2. ಕವಿಪ್ರನಿನಿ/ವಿಸಕಂಗಳ ಲೆಕ್ಕ ಘಟಕಗಳ ದಾಖಲೆ ಪುಸ್ತಕಗಳ ಪ್ರಕಾರ ದಿನಾಂಕ 31.05.2002 ರ ಅಂತ್ಯಕ್ಕೆ ಇದ್ದ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ/ಕವಿಪ್ರನಿನಿ ಕುಟುಂಬ ಪಿಂಚಣಿದಾರರ ಪಟ್ಟಿಯನ್ನು ಹಿಂದಿನ ಪುಟದಲ್ಲಿ ನಮೂದಿಸಿರುವ A2 ನಮೂನೆಯಲ್ಲಿ ಲೆಕ್ಕ ಘಟಕಗಳು A2 ವಿವರಣಾ ಪಟ್ಟಿಯನ್ನು ತಯಾರಿಸತಕ್ಕದು.

### A3: 31.05.2002 ರ ಅಂತ್ಯಕ್ಕೆ ಇದ್ದ ಕವಿಮಂ/ಕವಿಪ್ರನಿನಿಯ ಪಿಂಚಣಿದಾರರು 01.06.2002 ರ ನಂತರ ಮರಣ ಹೊಂದಿದ್ದು ಅವರ ವಾರಸುದಾರರು ನಿಯಮಾನುಸಾರ ಕುಟುಂಬ ಪಿಂಚಣಿ ಪಡೆಯುತ್ತಿರುವ ಕುಟುಂಬ ಪಿಂಚಣಿದಾರರ ಪಟ್ಟಿ.

3. ಕವಿಪ್ರನಿನಿ/ವಿಸಕಂಗಳ ಲೆಕ್ಕ ಘಟಕಗಳ ದಾಖಲೆ ಪುಸ್ತಕಗಳ ಪ್ರಕಾರ 31.05.2002 ರಂದು ಇದ್ದ ಕವಿಮಂ/ಕವಿಪ್ರನಿನಿಯ ಪಿಂಚಣಿದಾರರು 01.06.2002 ರ ನಂತರ ಮರಣ ಹೊಂದಿದ್ದು ಅವರ ವಾರಸುದಾರರು ನಿಯಮಾನುಸಾರ ಕುಟುಂಬ ಪಿಂಚಣಿ ಪಡೆಯುತ್ತಿರುವ ಕುಟುಂಬ ಪಿಂಚಣಿದಾರರ ಪಟ್ಟಿಯನ್ನು ಹಿಂದಿನ ಪುಟದಲ್ಲಿ ನಮೂದಿಸಿರುವ A3 ನಮೂನೆಯಲ್ಲಿ ಲೆಕ್ಕ ಘಟಕಗಳು ವಿವರಣಾ ಪಟ್ಟಿಯನ್ನು ತಯಾರಿಸತಕ್ಕದು.

4. ಮೇಲ್ಕಂಡ A1, A2 & A3 ವಿವರಣೆ ಪಟ್ಟಿಗಳ ಬಗ್ಗೆ ಈ ಕೆಳಕಂಡ ಅಂಶಗಳನ್ನು ಪಾಲಿಸುವುದು.

   (i) ದಿನಾಂಕ 31.05.2002 ರಂದು ಇದ್ದ ಪಿಂಚಣಿದಾರರಿಗೆ/ಕುಟುಂಬ ಪಿಂಚಣಿದಾರರಿಗೆ ಪಾವತಿಯಾಗುವ ಪಿಂಚಣಿ/ಕುಟುಂಬ ಪಿಂಚಣಿ ಸಂಪೂರ್ಣವಾಗಿ ಕರ್ನಾಟಕ ಸರ್ಕಾರ ಭರಿಸಬೇಕಿರುವುದರಿಂದ, ಈ ಮೊತ್ತವನ್ನು ಲಗತ್ತಿಸಿರುವ ಪರಿಷ್ಕೃತ ನಿಧಿ ಕೋರಿಕೆಯ **'G3 & G4'** ಅಂಕಣದಲ್ಲಿ ನಮೂದಿಸತಕ್ಕದು.

   (ii) A1, A2 & A3 ವಿವರಣೆ ಪಟ್ಟಿಯಲ್ಲಿನ ಪಿಂಚಣಿದಾರರ/ಕುಟುಂಬ ಪಿಂಚಣಿದಾರರ ಪಿಂಚಣಿ/ಕುಟುಂಬ ಪಿಂಚಣಿ ವೆಚ್ಚ ಸಂಪೂರ್ಣವಾಗಿ ಸರ್ಕಾರ ಭರಿಸಬೇಕಾದ ಭಾಗವೆಂದು ಕೆಂಪುಶಾಹಿಯಲ್ಲಿ ಪಿಂಚಣಿ ಪುಸ್ತಕ (PPO) ದ ಎರಡು ಭಾಗಗಳಲ್ಲಿ ಹಾಗೂ ಪಿಂಚಣಿ ಬಟವಾಡೆ ಪುಸ್ತಕದಲ್ಲಿ (Pension Scale Register) ನಮೂದಿಸುವುದು. ಒಂದು ವೇಳೆ ನಿಗಮದ ಆದೇಶದ ಅನುಸಾರ ಪಿಂಚಣಿ/ಕುಟುಂಬ ಪಿಂಚಣಿ ಪರಿಷ್ಕೃತಗೊಂಡಲ್ಲಿ ಪರಿಷ್ಕೃತ ಪಿಂಚಣಿ/ಕುಟುಂಬ ಪಿಂಚಣಿಯನ್ನು ಸಹ ಸರ್ಕಾರ ಭರಿಸಬೇಕಾದ ಭಾಗವೆಂದು PPO ಪುಸ್ತಕದಲ್ಲಿ ಹಾಗೂ Pension Scale Register ನಲ್ಲಿ ಆಂತರಿಕ ತನಿಖೆಗೆ ಒಳಪಡಿಸಿ ತಪ್ಪದೇ ನಮೂದಿಸುವುದು.

## Statement A1 : List of KEB/KPTCL pensioners existed as at 31-5-2002

**Name of the Division :**

**Statement A1**

| Sl. No | RPAR No | Name | designation | PPO No | PPO Date | Date of Retirement | Date of Entry into Service | DCRG | Commutation |
|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 |
| | | | | | | | | | |

## Statement A2: List of KEB/KPTCL family pensioners existed as at 31-5-2002

**Name of the Division :**

**Statement A2**

| Sl. No | RPAR No | Name | designation | PPO No | PPO Date | Date of Retirement | Date of Entry into Service | DCRG | Commutation | Date of Death After Retirement | FP Sanctioned Ref No/Date | Name of Family Pensioner |
|---|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 |
| | | | | | | | | | | | | |

## Statement A3 : List of KEB/KPTCL pensioners existed as at 31-5-2002 but due to their death on or after 1-6-2002, family pension as per Rules sanctioned to the legal heirs eligible as family pensioners

**Name of the Division :**

**Statement A3**

| Sl. No | RPAR No | Name | designation | PPO No | PPO Date | Date of Retirement | Date of Entry into Service | DCRG | Commutation | Date of Death After Retirement | FP Sanctioned Ref | Name of Family Pensioner |
|---|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 |
| | | | | | | | | | | | | |

**01.06.2002 ರ ನಂತರ ನಿವೃತ್ತಿಯಾದ ಕವಿಪ್ರನಿನಿ/ವಿಸಕಂಗಳ ಪಿಂಚಣಿದಾರರ/ಕುಟುಂಬ ಪಿಂಚಣಿದಾರರ ಪಟ್ಟಿ ತಯಾರಿಸುವ ಬಗ್ಗೆ ಮಾರ್ಗಸೂಚಿ:**

1. ಕವಿಪ್ರನಿನಿ ವೆಬ್ ತಾಣದಲ್ಲಿ 01.06.2002 ರ ನಂತರ ನಿವೃತ್ತಿಯಾದವರ ವಿವರಗಳನ್ನು **ಎಕ್ಸಲ್ ನಮೂನೆಯಲ್ಲಿ** ಕವಿಪ್ರನಿನಿ web-site ನಲ್ಲಿ ಪ್ರಕಟಿಸಲಾಗಿರುತ್ತದೆ. ಲೆಕ್ಕ ಘಟಕವು ಅದರ ಅವಶ್ಯಕತೆಗನುಸಾರವಾಗಿ ಮಾಹಿತಿಯನ್ನು ಗಣಕಯಂತ್ರಕ್ಕೆ copy ಮಾಡಿ ಆಯಾ ಲೆಕ್ಕ ಘಟಕದ ಪಿಂಚಣಿದಾರರ ವಿವರಗಳನ್ನು RPAR/PPO ಸಂಖ್ಯೆವಾರು ವಿಂಗಡಿಸಿಕೊಂಡು ಲೆಕ್ಕ ಘಟಕದಲ್ಲಿ ಪಿಂಚಣಿ ಪಡೆಯುತ್ತಿರುವ ಅಂಕಿ ಅಂಶಗಳ ದಾಖಲೆ ಪುಸ್ತಕಗಳಿಗೆ ತಾಳೆಮಾಡಿ (ಸಾರ್ಟ್ ಮಾಡಿ) ಲಗತ್ತಿಸಿರುವ ನಮೂನೆಯಲ್ಲಿ ವಿವರಣೆ ಪಟ್ಟಿ-B ಎಂದು ತಯಾರಿಸಿ ಅಂಕಣ 1 ರಿಂದ 16 ಮೊದಲನೆ ಹಂತದಲ್ಲಿ ಭರ್ತಿ ಮಾಡತಕ್ಕದು.
2. ಮೇಲ್ಕಂಡಂತೆ ವಿವರಣೆ ಪಟ್ಟಿ-B ತಯಾರಿಸಿದ ನಂತರ ವಿವರಣೆ ಪಟ್ಟಿಯಲ್ಲಿನ ಯಾವುದೇ ಪಿಂಚಣಿದಾರ ನಿಧನ ಹೊಂದಿದಲ್ಲಿ, ವಿವರಣೆ ಪಟ್ಟಿಯ ಕಲಮು-17 ರಲ್ಲಿ ನಿಧನ ಹೊಂದಿದ ದಿನಾಂಕ ನಮೂದಿಸಿ ಮತ್ತು ಕಲಮು-18 ಮತ್ತು 19 ರಲ್ಲಿ ಕುಟುಂಬ ಪಿಂಚಣಿದಾರರ ಹೆಸರು ಮತ್ತು ಮುಂಜೂರಾತಿ ವಿವರ ಕ್ರಮವಾಗಿ ದಾಖಲಿಸತಕ್ಕದ್ದು.

B1: 01.06.2002 ರ ನಂತರ ನಿವೃತ್ತಿಯಾದ ಕವಿಪ್ರನಿನಿ/ವಿಸಕಂಗಳ ಪಿಂಚಣಿದಾರರ ಪಟ್ಟಿ:

3. ವಿವರಣೆ ಪಟ್ಟಿ-B (ಅಂಕಣ 1 ರಿಂದ 16 ನಮೂದಿಸಿದ್ದು ಅಂಕಣ 17,18,19 ಖಾಲಿ ಇರುವ) ಆಧಾರದ ಮೇಲೆ ಪಿಂಚಣಿದಾರರ ವಿವರಗಳನ್ನು (ಕಲಮು-1 ರಿಂದ 16) ಮಾತ್ರ ವಿಂಗಡಿಸಿ(ಸಾರ್ಟ್ ಮಾಡಿ) ಇದನ್ನು "B1------01.06.2002 ರ ನಂತರ ಮೊವೃತ್ತಿಯಾಗಿ ಕವಿಪ್ರನಿನಿ/ವಿಸಕಂಗಳ ಪಿಂಚಣಿದಾರರು ಲೆಕ್ಕ ಘಟಕದಲ್ಲಿ ಪಿಂಚಣಿ ಪಡೆಯುತ್ತಿರುವ ವಿವರಣೆ ಪಟ್ಟಿ" ಎಂದು ತಯಾರಿಸತಕ್ಕದು.

B2: 01.06.2002 ರ ನಂತರ ನಿವೃತ್ತಿಯಾದ ಕವಿಪ್ರನಿನಿ/ವಿಸಕಂಗಳ ಪಿಂಚಣಿದಾರರು 01.06.2002 ರ ನಂತರ ನಿಧನ ಹೊಂದಿದ ಕಾರಣ ನಿಯಮಾನುಸಾರ ಕುಟುಂಬ ಪಿಂಚಣಿ ಪಡೆಯುತ್ತಿರುವ ಕುಟುಂಬ ಪಿಂಚಣಿದಾರರ ಪಟ್ಟಿ.

4. ವಿವರಣೆ ಪಟ್ಟಿ-B ಅಂಕಣ 17, 18, 19 ರಲ್ಲಿನ ದಾಖಲೆ ಆಧಾರದ ಮೇಲೆ ಕುಟುಂಬ ಪಿಂಚಣಿದಾರರ ವಿವರಗಳನ್ನು (ಕಲಮು-1 ರಿಂದ 19) ಮಾತ್ರ ವಿಂಗಡಿಸಿ (ಸಾರ್ಟ್ ಮಾಡಿ) ಇದನ್ನು "B2 ಲೆಕ್ಕ ಘಟಕದ ಕುಟುಂಬ ಪಿಂಚಣಿದಾರರ ವಿವರಣೆ ಪಟ್ಟಿ" ಎಂದು ತಯಾರಿಸತಕ್ಕದು.
5. ಮೇಲ್ಕಂಡ B1 & B2 ವಿವರಣೆ ಪಟ್ಟಿಗಳ ಬಗ್ಗೆ ಈ ಕೆಳಕಂಡ ಅಂಶಗಳನ್ನು ಪಾಲಿಸುವುದು.

(i) ಪಿಂಚಣಿ ಪಾವತಿಸುವ ಲೆಕ್ಕ ಘಟಕಗಳು ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ, ಪಿಂಚಣಿದಾರರಿಗೆ ಅನ್ವಯವಾಗುವ ಕರ್ನಾಟಕ ಸರ್ಕಾರವು ಭರಿಸಬೇಕಾದ ಭಾಗದ ವೆಚ್ಚ (ಕಲಮು-15) ಮತ್ತು ವಿದ್ಯುತ್ ಸರಬರಾಜು ಕಂಪನಿಗಳು ಭರಿಸಬೇಕಾದ ಭಾಗದ ವೆಚ್ಚದ (ಕಲಮು-16) ಅನುಪಾತವು ಅವರ ಮರಣಾ ನಂತರವೂ ಸಹ ಅವರ ಕುಟುಂಬ ಪಿಂಚಣಿದಾರರಿಗೆ ಅದೇ ಅನುಪಾತವನ್ನು ಮುಂದುವರೆಸುವುದು ಅತ್ಯಂತ ಅವಶ್ಯಕವಾಗಿರುತ್ತದೆ ಹೊರತು ಯಾವುದೇ ಬದಲಾವಣೆ ಇರುವುದಿಲ್ಲ.

(ii) ಅಂಕಣ 15 & 16 ರಲ್ಲಿನ ಅನುಪಾತ ಪ್ರಕಾರ ಸರ್ಕಾರ ಮತ್ತು ಕಂಪನಿ ಭರಿಸಬೇಕಾದ ಭಾಗ ಕೆಂಪುಶಾಹಿಯಲ್ಲಿ ಪಿಂಚಣಿ ಪುಸ್ತಕ (PPO) ದ ಎರಡು ಭಾಗಗಳಲ್ಲಿ ಹಾಗೂ ಪಿಂಚಣಿ ಬಟವಾಡೆ ಪುಸ್ತಕದಲ್ಲಿ ನಮೂದಿಸುವುದು. ಒಂದು ವೇಳೆ ನಿಗಮದ ಆದೇಶದ ಅನುಸಾರ ಪಿಂಚಣಿ/ಕುಟುಂಬ ಪಿಂಚಣಿ ಪರಿಷ್ಕೃತಗೊಂಡಲ್ಲಿ ಪರಿಷ್ಕೃತ ಪಿಂಚಣಿ/ಕುಟುಂಬ ಪಿಂಚಣಿಯನ್ನು ಸಹ ಸರ್ಕಾರ ಮತ್ತು ಕಂಪನಿ ಭರಿಸಬೇಕಾದ ಭಾಗದ ವೆಚ್ಚವೆಂದು PPO ಪುಸ್ತಕದಲ್ಲಿ ಹಾಗೂ Pension Scale Register ನಲ್ಲಿ ಆಂತರಿಕ ತನಿಖೆಗೆ ಒಳಪಡಿಸಿ ತಪ್ಪದೇ ನಮೂದಿಸುವುದು.

(iii) ದಿನಾಂಕ 01.06.2002 ರ ನಂತರ ನಿವೃತ್ತಿಯಾದ ಪಿಂಚಣಿದಾರರಿಗೆ ಪಾವತಿಯಾಗುವ ಪಿಂಚಣಿ ಕರ್ನಾಟಕ ಸರ್ಕಾರ ಮತ್ತು ಸಂಬಂಧಪಟ್ಟ ಕಂಪನಿ ಭರಿಸಬೇಕಿರುವುದರಿಂದ, ಪರಿಷ್ಕೃತ ನಿಧಿ ಕೋರಿಕೆಯ ಪಟ್ಟಿಯಲ್ಲಿ ಸರ್ಕಾರ ಭರಿಸಬೇಕಾದ ಭಾಗದ ಪಿಂಚಣಿ ವೆಚ್ಚ (ಅಂಕಣ **GC3** ರಲ್ಲಿ ಮತ್ತು ಕಂಪನಿ ಭರಿಸಬೇಕಾದ ವೆಚ್ಚ **GC4** ಅಂಕಣದಲ್ಲಿ ನಮೂದಿಸುವುದು.

(iV) ದಿನಾಂಕ 01.06.2002 ರ ನಂತರ ನಿವೃತ್ತಿಯಾದವರ ಕುಟುಂಬ ಪಿಂಚಣಿದಾರರ ವೆಚ್ಚ ಕರ್ನಾಟಕ ಸರ್ಕಾರ ಹಾಗೂ ಸಂಬಂಧಪಟ್ಟ ಕಂಪನಿ ಭರಿಸಬೇಕಿರುವುದರಿಂದ, ಸರ್ಕಾರ ಭರಿಸಬೇಕಾದ ಭಾಗದ ವೆಚ್ಚ ನಿಧಿ ಕೋರಿಕೆ ಅಂಕಣ **(GC7)** ಮತ್ತು ಕಂಪನಿ ಭರಿಸಬೇಕಾದ ವೆಚ್ಚ **(GC8)** ಮೊತ್ತವನ್ನು ಕ್ರಮವಾಗಿ ಪರಿಷ್ಕೃತ ನಿಧಿ ಕೋರಿಕೆ ಪಟ್ಟಿಯಲ್ಲಿ ನಮೂದಿಸುವುದು.

**Statement B1: List of KPTCL/ESCOMs Pensioners who retired from service on or after 1-6-2002**

**Statement B1**

**Name of the Division :** ( to be prepared by concerned Divisions)

| Sl. No | RPAR No | Name | designation | PPO No | PPO Date | Date of Retirement | Date of Entry into Service | DCRG | Commutation | DCRG | | Commutated Pension | | Govt % | ESCOM % |
|---|---|---|---|---|---|---|---|---|---|---|---|---|---|---|---|
| | | | | | | | | | | GOK Portion | ESCOM Portion | GOK Portion | ESCOM Portion | | |
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 |
| | | | | | | | | | | | | | | | |

**Statement B2: List of KPTCL/ESCOMs Pensioners who retired from service on or after 1-6-2002 but due to their death on or after 1-6-2002, family pension as per sanctioned to their family pensioners**

**Statement B2**

**Name of the Division :** ( to be prepared by concerned Divisions)

| Sl. No | RPAR No | Name | designation | PPO No | PPO Date | Date of Retirement | Date of Entry into Service | DCRG | Commutation | DCRG | | Commutated Pension | | Govt % | ESCOM % | Date of Death After Retirement | FP Sanctioned Ref No/Date | Name of Family Pensioner |
|---|---|---|---|---|---|---|---|---|---|---|---|---|---|---|---|---|---|---|
| | | | | | | | | | | GOK Portion | ESCOM Portion | GOK Portion | ESCOM Portion | | | | | |
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 | 17 | 18 | 19 |
| | | | | | | | | | | | | | | | | | | |

**E: ಕಂಪನಿ ನಿಗಮ ಕಛೇರಿಗಳ ಪರಿವರ್ತಿತ ಪಿಂಚಣಿ ಮತ್ತು ಉಪದಾನ ಮರುಪಾವತಿ ಕ್ಲೇಮುಗಳು:**

1. ಕವಿಪ್ರನಿನಿ/ವಿಸಕಂಗಳ ಲೆಕ್ಕ ಘಟಕಗಳು ಪರಿವರ್ತಿತ ಪಿಂಚಣಿ ಮತ್ತು ಉಪದಾನ ಪಾವತಿಸಲು ಆಯಾ ಕಂಪನಿಯ ನಿಗಮ ಕಛೇರಿಯಿಂದ ನಿಧಿ ಕೋರಿಕೆ ಸಲ್ಲಿಸುವಾಗ ಸರ್ಕಾರ ಮತ್ತು ವಿಸಕಂ ಭರಿಸಬೇಕಾದ ಭಾಗದ ಅನುಪಾತವನ್ನು ಆಯಾ ಕಂಪನಿಯ ಆರ್ಥಿಕ ಸಲಹೆಗಾರರ ಕಛೇರಿಗೆ ಕಡ್ಡಾಯವಾಗಿ ತಿಳಿಸತಕ್ಕದು.

2. ಕಂಡಿಕೆ–1 ರಲ್ಲಿನ ಮಾಹಿತಿ ಆಧಾರದ ಮೇಲೆ ಸರ್ಕಾರ ಮತ್ತು ವಿಸಕಂ ಭಾಗದ ವೆಚ್ಚವನ್ನು ವಿಂಗಡಿಸಿರುವುದನ್ನು ಖಚಿತ ಪಡಿಸಿಕೊಂಡು ಕವಿಪ್ರನಿನಿ/ವಿಸಕಂ ನಿಗಮ ಕಛೇರಿ ಮರುಪಾವತಿಗಾಗಿ ಕ್ಲೇಮುಗಳನ್ನು ಲಗತ್ತಿಸಿರುವ E1 ನಮೂನೆಯಲ್ಲಿ ಮರುಪಾವತಿ ಹುಂಡಿಗಳನ್ನು ಆಂತರಿಕ ತನಿಖೆಗೆ ಒಳಪಡಿಸಿ, ಪಿಂಚಣಿ ಮತ್ತು ಉಪದಾನ ಟ್ರಸ್ಟ್‌ಗೆ ಸಲ್ಲಿಸುವುದು.

**Statement E1: Statement of claims for reimbursement of Commuted pension and Gratuity released to to the accounting units of -------Company during --------------Month-------year**

**Statement E1**

| SL No | Name of the Retired Employee/Family Pensioer | Date of Retirement/ Death | RPAR No | PPO No | Name of the Division | Division BR No/Date | DCRG | | | Commutation | | | Other Recoveries, if any | Total (10-13-15) | Remarks |
|---|---|---|---|---|---|---|---|---|---|---|---|---|---|---|---|
| | | | | | | | GOK Portion | ESCOM Portion | Total | GOK Portion | ESCOM Portion | Total | | | |
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 |
| | | | | | | | | | | | | | | | |
| | | | | | | | | | | | | | | | |
| Grand Total | | | | | | | | | | | | | | | |

__________ವಿಭಾಗದ__________(ವರ್ಷ)__________ಮಾಹೆಯ ಪಿಂಚಣಿ/ಕುಟುಂಬ ಪಿಂಚಣಿ ನಿಧಿ ಕೋರಿಕೆಯ ಪತ್ರ

ನಮೂನೆ-2.

**I.** ದಿನಾಂಕ **31-05-2002** ರವರೆಗೆ ಇದ್ದ ಪಿಂಚಣಿದಾರರು/ಕುಟುಂಬ ಪಿಂಚಣಿದಾರರು

| ಪಿಂಚಣಿದಾರರ ಪಿಂಚಣಿ | | | ಕುಟುಂಬ ಪಿಂಚಣಿದಾರರ ಪಿಂಚಣಿ | | |
|---|---|---|---|---|---|
| A1 ಪಿಂಚಣಿದಾರರ ಸಂಖ್ಯೆ ಮತ್ತು ಪಿಂಚಣಿ ಮೊತ್ತ | | ಸರ್ಕಾರ ಭರಿಸಬೇಕಾದ ಪಿಂಚಣಿ ಮೊತ್ತ | A2 ಕುಟುಂಬ ಪಿಂಚಣಿದಾರರ ಸಂಖ್ಯೆ ಮತ್ತು ಪಿಂಚಣಿ ಮೊತ್ತ | | ಸರ್ಕಾರ ಭರಿಸಬೇಕಾದ ಕುಟುಂಬ ಪಿಂಚಣಿ ಮೊತ್ತ |
| G1 | G2 | G3 | G4 | G5 | G6 |
| | | | | | |
| a1 | ಸಂಖ್ಯೆ | | b1 | ಸಂಖ್ಯೆ | |
| a2 | ಮೂಲ ಪಿಂಚಣಿ ಮೊತ್ತ | | | | |
| a3 | ಪರಿವರ್ತಿತ ಪಿಂಚಣಿ ಕಳೆದು ನಂತರದ ಮೂಲ ಪಿಂಚಣಿ ಮೊತ್ತ | | b2 | ಪಿಂಚಣಿ ಮೊತ್ತ : | |
| a4 | ತುಟ್ಟಿ ಭತ್ಯೆ | | b3 | ತುಟ್ಟಿ ಭತ್ಯೆ | |
| a5 | ಪರಿಷ್ಕರಣೆಯಿಂದ ಉಂಟಾದ ಹೆಚ್ಚಳ | | b4 | ಪರಿಷ್ಕರಣೆಯಿಂದ ಉಂಟಾದ ಹೆಚ್ಚಳ | |
| a6 | ಇತರೆ | | b5 | ಇತರೆ | |
| | **ಒಟ್ಟು (3+4+5+6)** | | | **ಒಟ್ಟು (3+4+5)** | |

**II.** ದಿನಾಂಕ **1-6-2002** ರಂದು ಮತ್ತು ಅನಂತರ ನಿವೃತ್ತಿ ಹೊಂದಿದ ಪ್ರತಿ ಪಿಂಚಣಿದಾರರಿಗೆ/ಕುಟುಂಬ ಪಿಂಚಣಿದಾರರಿಗೆ, ಸುತ್ತೋಲೆ------ರಲ್ಲಿ ಸೂಚಿಸಿರುವ ಅನುಪಾತ ಪ್ರಕಾರ ಸರ್ಕಾರ/ಕಂಪನಿ ಭರಿಸಬೇಕಾದ ವೆಚ್ಚ ಹಂಚಿಕೆ ಮಾಡುವದು

| ಈ ತಿಂಗಳ ಪಿಂಚಣಿದಾರರ ಸಂಖ್ಯೆ ಮತ್ತು ಪಿಂಚಣಿ ಮೊತ್ತ | | ರಾಜ್ಯ ಸರ್ಕಾರ ಭರಿಸಬೇಕಾದ ಪಿಂಚಣಿ ಮೊತ್ತ | ಕಂಪನಿ ಭರಿಸಬೇಕಾದ ಭಾಗದ ಕುಟುಂಬ ಪಿಂಚಣಿ ಮೊತ್ತ | ಈ ತಿಂಗಳ ಕುಟುಂಬಪಿಂಚಣಿದಾರರ ಸಂಖ್ಯೆ ಮತ್ತು ಪಿಂಚಣಿ ಮೊತ್ತ | | ರಾಜ್ಯ ಸರ್ಕಾರ ಭರಿಸಬೇಕಾದ ಕುಟುಂಬ ಪಿಂಚಣಿ ಮೊತ್ತ | ಕಂಪನಿ ಭರಿಸಬೇಕಾದ ಭಾಗದ ಕುಟುಂಬ ಪಿಂಚಣಿ ಮೊತ್ತ |
|---|---|---|---|---|---|---|---|
| GC1 | GC2 | GC3 | GC4 | GC5 | GC6 | GC7 | GC8 |
| a1 | ಸಂಖ್ಯೆ | | | b1 | ಸಂಖ್ಯೆ | | |
| a2 | ಮೂಲ ಪಿಂಚಣಿ ಮೊತ್ತ : | | | | | | |
| a3 | ಪರಿವರ್ತಿತ ಪಿಂಚಣಿ ಕಳೆದು ನಂತರದ ಮೂಲ ಪಿಂಚಣಿ ಮೊತ್ತ | | | b2 | ಪಿಂಚಣಿ ಮೊತ್ತ : | | |
| a4 | ತುಟ್ಟಿ ಭತ್ಯೆ | | | b3 | ತುಟ್ಟಿ ಭತ್ಯೆ | | |
| a5 | ಪರಿಷ್ಕರಣೆಯಿಂದ ಉಂಟಾದ ಹೆಚ್ಚಳ | | | b4 | ಪರಿಷ್ಕರಣೆಯಿಂದ ಉಂಟಾದ ಹೆಚ್ಚಳ | | |
| a6 | ಇತರೆ | | | b5 | ಇತರೆ | | |
| | **ಒಟ್ಟು (3+4+5+6)** | | | a(2+3+4+5) | **ಒಟ್ಟು b(3+4+5)** | | |
| a1+b1 | **ಸಂಖ್ಯೆ** | | | a(1)+b(1) | **ಸಂಖ್ಯೆ** | | |
| | **ಮೊತ್ತ (a+b)** | | | | **ಮೊತ್ತ (a+b)** | | |

ಅನುಬಂಧ

| | |
|---|---|
| ಸರ್ಕಾರ ಭರಿಸಬೇಕಾದ ವೆಚ್ಚ **(G3+G6+GC3+GC7)** | |
| ಕಂಪನಿ ಭರಿಸಬೇಕಾದ ವೆಚ್ಚ **(GC4+GC8)** | |
| ನಿಧಿ ಕೋರಿಕೆಯ ಒಟ್ಟು ಮೊತ್ತ | |

**ದೃಢೀಕರಣ**

1.) ----------ತಿಂಗಳಿನಲ್ಲಿ ಪಾವತಿ ಮಾಡಬೇಕದ ವಾಸ್ತವಿಕ ಮತ್ತು ಪಿಂಚಣಿಯ ಮೊತ್ತವು ರೋಲ್ ಅನ್ವಯ ರೂ----------------ಎಂದು ದೃಢೀಕರಿಸಲಾಗಿದೆ

2.)----------ಮಾಹೆಯ ಕ್ಲೇಮ್‌ನ್ನು ಶೆಡ್ಯೂಲ್ ಪಿ ಪಿ ಓ ಆದೇಶದಲ್ಲಿ ಅನುಮೋದಿತ ಪಿಂಚಣಿ/ಕುಟುಂಬ ಪಿಂಚಣಿಯಂತೆ ಡಿಮ್ಯಾಂಡ್ ಮಾಡಿದ ನಂತರವೇ----------------ಮಾಹೆಯ ಬಿಲ್ಲನ್ನು ತಯಾರಿಸಿದೆ ಮತ್ತು ಪರಿಶೀಲಿಸಲಾಗಿದೆ.

3.) ರೋಲ್‌ನಲ್ಲಿ ಕ್ಲೇಮ್ ಮಾಡಿರುವ ಮೊತ್ತವು ಜೀವಂತವಾಗಿರುವ ಪಿಂಚಣಿದಾರರ/ಕುಟುಂಬ ಪಿಂಚಣಿದಾರರ ಕ್ಲೇಮನ್ನು ಮಾತ್ರ ಒಳಗೊಂಡಿರುತ್ತದೆ. ಕಾಲ-ಕಾಲಕ್ಕೆ ನೀಡಬೇಕಾದ ಜೀವಂತವಾಗಿರುವ ಜೀವಂತ ದೃಢೀಕರಣ ಪತ್ರವನ್ನು ನೀಡಿದವರ ಪಿಂಚಣಿ/ಕುಟುಂಬ ಪಿಂಚಣಿದಾರರ ಕ್ಲೇಮನ್ನು ಮಾತ್ರ ಈ ಬಿಲ್‌ನಲ್ಲಿ ಸೇರಿಸಲಾಗಿದೆ ಎಂದು ದೃಢೀಕರಿಸಲಾಗಿದೆ.

4.) ----------ತಿಂಗಳಲ್ಲಿ ಪಾವತಿ ಮಾಡಿದ ಪಿಂಚಣಿ ಮೊತ್ತವನ್ನು ನಗದು ಪುಸ್ತಕದಲ್ಲಿರುವಂತೆ ಪರಿಶೀಲಿಸಿದೆ ಹಾಗೂ ಬ್ಯಾಂಕ್ ಖಾತೆ ಸಂಖ್ಯೆ -------------ಯ ಪಾಸ್ ಶೀಟ್ ನೊಂದಿಗೆ ತಾಳೆ ಮಾಡಿದೆ. ಪಿಂಚಣಿ ಟ್ರಸ್ಟ್‌ನಿಂದ ಹಿಂದಿನ ತಿಂಗಳು ಅಂದರೆ------- ಮಾಹೆಯಲ್ಲಿ ರೂ ---------------ಪಾವತಿಗಾಗಿ ಪಡೆದಿದೆ. ಇದನ್ನು ಸಂಪೂರ್ಣವಾಗಿ ಪಿಂಚಣಿ/ನಿವೃತ್ತಿ ಸೌಲಭ್ಯಗಳನ್ನು ಪಾವತಿ ಮಾಡಲು ಉಪಯೋಗಿಸಿದೆ. ಈ ತಿಂಗಳಿಗೆ ಪಾವತಿಗಾಗಿ ಮೇಲೆ ನಮೂದಿಸಿರುವ ಸೂಚನೆ-1ರಲ್ಲಿ ಕೋರಿರುವ ಮೊತ್ತ ರೂ.------ ಕ್ರಮಬದ್ಧವಾಗಿರುತ್ತದೆ. ಪ್ರಸ್ತುತದಲ್ಲಿರುವಂತೆ ನಗದು ಪುಸ್ತಕದ ಅಂತಿಮ ಶಿಲ್ಕು ರೂ.---------------- ಮತ್ತು ಸಂಕೀರ್ಣ ಮೊಬಲಗು ರೂ.--------------ಆಗಿರುತ್ತದೆ.

5.) ಪಿಂಚಣಿ/ಕುಟುಂಬ ಪಿಂಚಣಿ ಶೆಡ್ಯೂಲ್‌ನಲ್ಲಿ ಡಿಮ್ಯಾಂಡ್ ಮಾಡಿದ ನಂತರವೇ ರೋಲನ್ನು ತಯಾರಿಸಿ ಸರಿಯಾದ ಮೊತ್ತಕ್ಕೆ ಬಿಲ್ಲನ್ನು ತಯಾರಿಸಲಾಗಿದೆ ಎಂದು ದೃಢೀಕರಿಸಲಾಗಿದೆ.

6.) ಬ್ಯಾಂಕ್ ವಾರು ಮತ್ತು ಉಪವಿಭಾಗವಾರು ಸಾರಸಂಗ್ರಹವನ್ನು ತಯಾರಿಸಿ ಲಗತ್ತಿಸಲಾಗಿದೆ.

ಸಹಾಯಕ ಲೆಕ್ಕಾಧಿಕಾರಿ
__________ವಿಭಾಗ

ಲೆಕ್ಕಾಧಿಕಾರಿ
__________ವಿಭಾಗ

ಪರಿಶೀಲಿಸಿದೆ
ಲೆಕ್ಕಾಧಿಕಾರಿ
(ಆಂತರಿಕ ಪರಿಶೋಧನೆ)